ಅನುಭವಗಳನ್ನೂ ನಮೂದಿಸುತ್ತಿದ್ದರು. ನಾನು ಬಹಳ ಸಲ ಅವರ ಶಿವಾಜಿ ವಿವಿ ಕ್ವಾರ್ಟರ್ಸ್‌ದಲ್ಲಿ ಉಳಿದುಕೊಂಡಿದ್ದೇನೆ. ಹಾಗೆ ಹೋದಾಗ ಸಾಧ್ಯವಿದ್ದಷ್ಟೂ ಹೊತ್ತು ನನ್ನ ಜೊತೆಗಿರುವಂತೆ ಸಮಯ ಹೊಂದಿಸಿಕೊಳ್ಳುತ್ತಿದ್ದರು.

ಶಾಂತಿನಾಥರು ಕನ್ನಡದ ವಿಖ್ಯಾತ ಕತೆಗಾರರೆಂದು ಅವರ ಸಹೋದ್ಯೋಗಿಗಳು, ಊರಿನ ಕೆಲವು ಮರಾಠೀ ಲೇಖಕರಿಗೆ ತಿಳಿದಿತ್ತು. ನಾನು ಅವರಲ್ಲಿದ್ದಾಗ ಅಂಥವರನ್ನು ಮನೆಗೆ ಆಮಂತ್ರಿಸುತ್ತಿದ್ದರು. ಆಗ ನನ್ನ / ನಮ್ಮ ಮತ್ತು ಅತಿಥಿಗಳ ನಡುವಿನ ಕೊಂಡಿ ಹಿಂದೀ ಭಾಷೆ. ನಾನು ಶಾಂತಿನಾಥರ ಒಂದೊಂದು ಕತೆಯನ್ನು ತೆಗೆದುಕೊಂಡು, ನಿಧಾನವಾಗಿ ಓದುತ್ತ, ಹಿಂದಿಗೆ ಅನುವಾದಿಸಿ ಹೇಳುತ್ತಿದ್ದೆ. ಅದು ಪರಸ್ಪರ ಚರ್ಚೆ, ವಿಮರ್ಶೆ, ಪ್ರಶಂಸೆಯ ಗೋಷ್ಠಿಯಾಗಿ ಪರಿಣಮಿಸುತ್ತಿತ್ತು.

ಮಹಾರಾಷ್ಟ್ರದಲ್ಲಿ ಎಲ್ಲಾ ರೀತಿಯ ನಾಟಕ ಪ್ರಯೋಗಗಳಿಗೆ ಪುಣೆ, ಕೊಲ್ಹಾಪುರ, ಮುಂಬಯಿ ತವರೂರು. ಕೊಲ್ಹಾಪುರದಲ್ಲಿ ಒಳ್ಳೊಳ್ಳೆಯ ನಾಟಕಗಳು ಬಂದಾಗ ದೇಸಾಯರು ಅವುಗಳ ಟಿಕೆಟ್ ಮುಂಗಡವಾಗಿಯೇ ಕಾದಿರಿಸಿ, ನನಗೆ ಪತ್ರ ಬರೆಯುತ್ತಿದ್ದರು. ದೇಸಾಯರಿಗೆ ಬೇಕಾದ ನಾನು ಅವರ ಮನೆಯಲ್ಲಿ ಎಂದೂ ಹೊರಗಿನವನಾಗಿರಲಿಲ್ಲ. ಸುಮಿತ್ರಾ ಅವರ ಲಘುಚೇಷ್ಟೆ, ವ್ಯಂಗ್ಯಮಿಶ್ರಿತ ಹರಿತ ಮಾತುಗಳನ್ನು ಮಾತ್ರ ನಸುನಕ್ಕು ತೇಲಿಸಬೇಕಾಗುತ್ತಿತ್ತು. ನಾನಿದ್ದರೆ ದೇಸಾಯರಿಗೆ ನಾವು ನೋಡುವ ನಾಟಕ, ಮರುದಿನ ಅದರ ವಿಮರ್ಶೆ, ಆಯಾ ಕಂಪನಿಯ, ನಟ–ನಟಿಯರ ಇತಿಹಾಸ ಎಲ್ಲದಕ್ಕೂ ಜೊತೆಯಾಗುತ್ತಿದ್ದೆ. ನನ್ನ ಹೊರತಾಗಿ ಬೇರೆ ಯಾರ ಜೊತೆಗೂ ಅಲ್ಲಿ ಅವರು ನಾಟಕ ನೋಡಿದ್ದು ನೆನಪಿಲ್ಲ.

ದೇಸಾಯರಿಗೆ ಇಳಿಗಣ್ಣು. ಸಂಜೆಯ ಅನಂತರ ಕಾಣಿಸುತ್ತಿರಲಿಲ್ಲ. ರಾತ್ರಿ ಏನಾದರೂ ಓದಲೇಬೇಕು, ನೋಡಬೇಕು ಎಂದಿದ್ದರೆ 9 ಗಂಟೆಯ ಹೊತ್ತಿಗೆ ಕಣ್ಣಿಗೆ ಡ್ರಾಪ್ಸ್ ಹಾಕಿಸಿಕೊಳ್ಳುತ್ತಿದ್ದರು. ಊಟ ಮುಗಿದೊಡನೆ ಸ್ಕೂಟರ್ ಹತ್ತುತ್ತಿದ್ದೆವು. ನಾನು ಚಾಲಕ, ಅವರು ಪಿಲಿಯನ್. ಸರಿಯಾಗಿ 10ಕ್ಕೆ ಪ್ಯಾಲೇಸ್ ಥೇಟರ್‌ದಲ್ಲಿ ನಾಟಕ. ರಾತ್ರಿ ಬಂದು ಮಲಗುವಾಗ ಎರಡೂವರೆ–ಮೂರು. ಶಾಂತಿನಾಥರ ಆಸಕ್ತಿ, ವ್ಯವಸ್ಥೆಯಿಂದಲೇ ನಾನು ಮರಾಠಿಯ ಹಲವಾರು ನಾಟಕಗಳನ್ನು ನೋಡಿದೆ. ದಾದಾ ಕೊಂಡಕೆ, ಶ್ರೀರಾಮ್ ಲಾಗೂ, ಅಮೋಲ್ ಪಾಳೇಕರ್ ಮುಂತಾದ ನಟರನ್ನು ಕಂಡೆ, ಮಾತಾಡಿಸಿದೆ, ರಂಗಸಂಗೀತ ಕೇಳಿದೆ. ನಾಟಕ ಮುಗಿದೊಡನೆ ಶಾಂತಿನಾಥರು ನನ್ನನ್ನು ವೇದಿಕೆಯ ಒಳಗಡೆಗೆ ಕರೆದುಕೊಂಡು ಹೋಗಿ ನಟವರ್ಗದವರಿಗೆ ಪರಿಚಯ ಮಾಡಿಸುತ್ತಿದ್ದರು. ಪ್ರದರ್ಶನೀಯತೆಯಲ್ಲಿ ಮರಾಠೀ ರಂಗದ ಸಾಧನೆ ದೊಡ್ಡದು.

ಸಂಗೀತ ದೇಸಾಯರಿಗೂ ಇಷ್ಟವಾದದ್ದು. ನಾನಿದ್ದಾಗ ನೆಪ ಮಾಡಿಕೊಂಡು, "ನಿಮಗ ಸಂಗೀತ ಸೇರತದಲ್ಲ?" ಎನ್ನುತ್ತಲೇ ಶಾಸ್ತ್ರೀಯ ಸಂಗೀತದ ಅಸಂಖ್ಯ ಕ್ಯಾಸೆಟ್ಸ್ ಜೊತೆ ನಾನಿರುವ ಕೊಠಡಿಯಲ್ಲಿಯೇ ಬಂದು ಕೂಡುತ್ತಿದ್ದರು. ಪತ್ನಿ, ಇಬ್ಬರೂ ಮಕ್ಕಳೂ ಜೊತೆಗೂಡುತ್ತಿದ್ದರು. ಎಲ್ಲರದೂ ಊಟ, ಸಂಗೀತಶ್ರವಣ ಕೂಡಿಯೇ ಸಾಗುತ್ತಿತ್ತು. ನನಗೆ ಠುಮರೀ, ಗಜಲ್‌ಗಳ ಹುಚ್ಚು ಹಿಡಿಸಿದ್ದೇ ಶಾಂತಿನಾಥರು.

ಆ ಕಾಲದಲ್ಲಿ ಹೇಮಾ ಮುಂಬಯಿಯಲ್ಲಿ ಇರುತ್ತಿದ್ದಳು. ನಾನು ಕೊಲ್ಹಾಪುರಕ್ಕೆ ಬರುವ ದಿನ ತಿಳಿದರೆ ತಾನೂ ಅಲ್ಲಿಗೆ ಬರುತ್ತಿದ್ದಳು. ಕೊಲ್ಹಾಪುರ ಅವಳ ತಾಯಿಯ ತವರೂರು. ಅದು ನಮಗಿಬ್ಬರಿಗೂ ಇಷ್ಟದ ನಗರ. ಶಾಂತಿನಾಥರ ಸ್ನೇಹ, ಸಹಕಾರ, ಮಾರ್ಗದರ್ಶನ ಇದ್ದೇ ಇರುತ್ತಿತ್ತು. ಅಲ್ಲಿಯ ಐತಿಹಾಸಿಕ ಸ್ಥಳಗಳು, ರಾಜವಾಡೆಗಳು, ಹೋಟೆಲ್‌ಗಳು, ಪಂಚನದಿ ಸಂಗಮ, ಕೆರೆಗಳು, ಮಹಾಲಕ್ಷ್ಮೀ ಇತರ ಗುಡಿಗಳು, ಸುತ್ತಮುತ್ತಲಿನ ಪ್ರವಾಸೀ ಸ್ಥಳಗಳು, ಶಿವಾಜಿಯ ಪ್ರಸಿದ್ಧ ಕೋಟೆ ಪನ್ಹಾಳಗಢ ಎಲ್ಲವನ್ನೂ, ಸ್ವತಃ ತಾವೇ ಸುತ್ತಾಡಿ ಅನುಭವಿಸಿ ಬಂದಿದ್ದವರಂತೆ ನಮಗೆ